ಸಂಖ್ಯೆ:ಇಎಕ್ಸ್‌ಇ/ಸಿಬ್ಬಂದಿ/ವಾಚಾ/ನೇಮಕಾತಿ/97/2011-12

ಜಿಲ್ಲಾಧಿಕಾರಿಗಳ ಕಛೇರಿ,
ತುಮಕೂರು ಜಿಲ್ಲೆ,
ತುಮಕೂರು, ದಿನಾಂಕ:22.05.2017

## ಅಧಿಸೂಚನೆ

ವಿಷಯ : ತುಮಕೂರು ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 04 ವಾಹನ ಚಾಲಕ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಕೈಗೊಂಡಿರುವ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸುವ ಬಗ್ಗೆ.

ಉಲ್ಲೇಖ
1 ಮಾನ್ಯ ಅಬಕಾರಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ:ಇಸಿಇ/32/ವಾಚಾ/ನೇಮಕಾತಿ/2008, ದಿನಾಂಕ:17.11.2011.
2 ಮಾನ್ಯ ಅಬಕಾರಿ ಆಯುಕ್ತರ ಪತ್ರ ಸಂಖ್ಯೆ:ಇಸಿಇ/11/ವಾಚಾ/ಎಪಿಟಿ/2013, ದಿನಾಂಕ:17.11.2014.
3 ಈ ಕಛೇರಿಯ ಪತ್ರ ಸಂಖ್ಯೆ:ಇಎಕ್ಸ್‌ಇ/ಸಿಬ್ಬಂಧಿ/ವಾ.ಚಾ/ನೇಮಕಾತಿ/97/2011-12, ದಿ:09.02.2017.
4 ಮಾನ್ಯ ಅಬಕಾರಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ:ಇಸಿಇ/11/ವಾಚಾ/ನೇಮಕಾತಿ/2016-17, ದಿನಾಂಕ:25.03.2017

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಮಾನ್ಯ ಅಬಕಾರಿ ಆಯುಕ್ತರ ಪತ್ರದಲ್ಲಿ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ 2011ನೇ ಸಾಲಿನಲ್ಲಿ ತುಮಕೂರು ಜಿಲ್ಲೆಗೆ 04 ಹುದ್ದೆಗಳನ್ನು ಹಂಚಿಕೆ ಮಾಡಿ ನಿಯಮಗಳನ್ನು/ಆದೇಶಗಳನ್ನು ಗಮನದಲ್ಲಿರಿಸಿಕೊಂಡು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸೂಚಿಸಲಾಗಿರುತ್ತದೆ. ಅದರಂತೆ ದಿನಾಂಕ:26.07.2012 ರಂದು ರಾಜ್ಯ ಮತ್ತು ಸ್ಥಳೀಯ ದಿನ ಪತ್ರಿಕೆಯಲ್ಲಿ ಪತ್ರಿಕಾ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ವಾಹನ ಚಾಲಕ ಹುದ್ದೆಗೆ ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರವನ್ನು ಹೊಂದಿರಬೇಕಿದ್ದು, ಅರ್ಜಿಯೊಂದಿಗೆ ಲಗತ್ತಿಸಬೇಕಿರುತ್ತದೆ.ಆದರೆ ಇಲಾಖೆಯಿಂದ ವಿತರಿಸಿರುವ ನಿಗಧಿತ ನಮೂನೆಯ ಅರ್ಜಿಯಲ್ಲಿ ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರ/ದೈಹಿಕ ಸಮರ್ಥನೆಯ ಪ್ರಮಾಣ ಪತ್ರದ ವಿವರ ಎಂದು ನಮೂದಿಸಲಾಗಿದೆ.ಇದು ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರ ಅಥವಾ ದೈಹಿಕ ಸಮರ್ಥನೆಯ ಪ್ರಮಾಣ ಪತ್ರ ಎಂಬ ಅರ್ಥವನ್ನು ನೀಡುತ್ತದೆ. ಅಲ್ಲದೆ ಅರ್ಜಿ ಆಹ್ವಾನಿಸಲು ದಿನಾಂಕ:26.07.2012 ರಂದು ಪ್ರಕಟವಾಗಿರುವ ಪತ್ರಿಕಾ ಪ್ರಕಟಣೆಯಲ್ಲಿ ಅಭ್ಯರ್ಥಿಗಳು 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು, ಚಾಲ್ತಿಯಲ್ಲಿರುವ ವಾಹನ ಚಾಲನಾ ಪರವಾನಗಿ (ಡ್ರೈವಿಂಗ್ ಲೈಸೆನ್ಸ್) ಹೊಂದಿರಬೇಕು ಎಂದು ತಿಳಿಸಲಾಗಿದ್ದು, ಪ್ರಥಮ ಚಿಕಿತ್ಸೆ ಪ್ರಮಾಣ ಪತ್ರ ಹೊಂದಿರಬೇಕೆಂಬ ಬಗ್ಗೆ ಸ್ಪಷ್ಟ ಸೂಚನೆ ಇರುವುದಿಲ್ಲ.

ಅಲ್ಲದೆ ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು 2006ರ ನಿಯಮ 10 ರ ರೀತ್ಯಾ ಉದ್ಯೋಗ ವಿನಿಮಯ ಕಛೇರಿಯಿಂದ ಅರ್ಹ ಅಭ್ಯಥಿಗಳ ಪಟ್ಟಿ ಪಡೆದು ಸದರಿ ಅಭ್ಯರ್ಥಿಗಳಿಂದಲೂ ಸಹ ಅರ್ಜಿ ಆಹ್ವಾನಿಸಬೇಕಿರುತ್ತದೆ.ಅದರಂತೆ ಕ್ರಮ ಕೈಗೊಂಡಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳ ಹಿನ್ನೆಲೆಯಲ್ಲಿ ಸದರಿ 04 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಮಾನ್ಯ ಅಬಕಾರಿ ಆಯುಕ್ತರಿಂದ ಅನುಮತಿ ಪಡೆದು ರದ್ದುಪಡಿಸಲು ಹಾಗೂ ಉಲ್ಲೇಖ(2)ರ ರೀತ್ಯಾ ಹೊಸದಾಗಿ ಹಂಚಿಕೆಯಾಗಿರುವ 09 ವಾಹನ ಚಾಲಕರ ಹುದ್ದೆಗಳೊಂದಿಗೆ ಸೇರಿಸಿ ಒಟ್ಟು 13 ವಾಹನ ಚಾಲಕರ

ಹುದ್ದೆಗಳಿಗೆ ಹೊಸದಾಗಿ ಅಧಿಸೂಚನೆ ಹೊರಡಿಸಲು ದಿನಾಂಕ:10.01.2017ರಂದು ನಡೆದ ನೇಮಕಾತಿ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ ಉಲ್ಲೇಖ(3)ರ ಈ ಕಛೇರಿಯ ಪತ್ರದಲ್ಲಿ ಅಬಕಾರಿ ಆಯುಕ್ತರನ್ನು ಕೋರಲಾಗಿರುತ್ತದೆ. ಮಾನ್ಯ ಅಬಕಾರಿ ಆಯುಕ್ತರ ಉಲ್ಲೇಖ(4)ರ ಪತ್ರದಲ್ಲಿ 2011ನೇ ಸಾಲಿನಲ್ಲಿ ಹಂಚಿಕೆ ಮಾಡಿರುವ 04 ವಾಹನ ಚಾಲಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಕೆಲವು ನ್ಯೂನತೆಗಳು ಕಂಡು ಬಂದಿರುವುದರಿಂದ ಸದರಿ ಅಧಿಸೂಚನೆಯನ್ನು ರದ್ದುಪಡಿಸಲು ಹಾಗೂ 2014ನೇ ಸಾಲಿನಲ್ಲಿ ಹೊಸದಾಗಿ ಹಂಚಿಕೆಯಾಗಿರುವ 09 ಚಾಲಕರ ಹುದ್ದೆಗಳಿಗೆ ಮೇಲ್ಕಂಡ 04 ಹುದ್ದೆಗಳನ್ನು ಸೇರಿಸಿ ಒಟ್ಟು 13 ವಾಹನ ಚಾಲಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲು ಅನುಮತಿ ನೀಡಿರುತ್ತಾರೆ.

ಆದ ಕಾರಣ ಮಾನ್ಯ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ ಬೆಂಗಳೂರು ರವರ ನಿರ್ದೇಶನದಂತೆ, 2011ನೇ ಸಾಲಿನಲ್ಲಿ ತುಮಕೂರು ಜಿಲ್ಲೆಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಹಂಚಿಕೆಯಾಗಿರುವ 04 ವಾಹನ ಚಾಲಕ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ನೇಮಕಾತಿ ಪ್ರಕ್ರಿಯೆಯನ್ನು ರದ್ದುಗೊಳಿಸಿದೆ ಹಾಗೂ 2014ನೇ ಸಾಲಿನಲ್ಲಿ ಹೊಸದಾಗಿ ಹಂಚಿಕೆಯಾಗಿರುವ 09 ಚಾಲಕರ ಹುದ್ದೆಗಳಿಗೆ ಮೇಲ್ಕಂಡ 04 ಹುದ್ದೆಗಳನ್ನು ಸೇರಿಸಿ ಒಟ್ಟು 13 ವಾಹನ ಚಾಲಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಅಬಕಾರಿ ಇಲಾಖೆಯ ವಾಹನ ಚಾಲಕ
ಹುದ್ದೆಯ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ
ತುಮಕೂರು ಜಿಲ್ಲೆ, ತುಮಕೂರು

ಪ್ರತಿಗಳನ್ನು:

1. ಮಾನ್ಯ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಅಬಕಾರಿ ಜಂಟಿ ಆಯುಕ್ತರು(ಜಾರಿ ಮತ್ತು ತನಿಖೆ) ಬೆಂಗಳೂರು ವಿಭಾಗ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.
3. ಅಬಕಾರಿ ಉಪ ಆಯುಕ್ತರು, ತುಮಕೂರು ಜಿಲ್ಲೆ, ತುಮಕೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಜಿಲ್ಲಾ ವಾರ್ತಾ ಹಾಗೂ ಪ್ರಚಾರಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ರವರಿಗೆ ಪತ್ರಿಕೆಗಳಲ್ಲಿ ಪ್ರಚಾರಕ್ಕಾಗಿ.
5. ಡಿಸ್ಟ್ರಿಕ್ಟ್ ಇನ್‌ಫಾರಮೆಟಿಕ್ಸ್ ಆಫೀಸರ್, ಎನ್.ಐ.ಸಿ., ತುಮಕೂರು ರವರ ಸೂಕ್ತ ಕ್ರಮಕ್ಕಾಗಿ.
6. ಕಛೇರಿ ಪ್ರತಿ/ಹೆಚ್ಚಿನ ಪ್ರತಿ